**ದಿನಾಂಕಃ 06.12.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : 2 ನೇ ಪ್ರತಿವಾದಿಯ ಪರ ವಕೀಲರಿಂದಃ**

5. ಪಿ. ವೀರಪ್ಪನವರ ಮನೆತನ ಮುಂಚೆಯಿಂದಲೂ ಶ್ರೀಮಂತ ಮನೆತನ ಎಂದರೆ ಸರಿ. ಅವರ ಮನೆತನಕ್ಕೆ ವೀರಪ್ಪನವರೇ ಯಜಮಾನರಾಗಿದ್ದರು ಎಂದರೆ ಸರಿ. ಅವರು ಶ್ರೀಮಂತರಾಗಿದ್ದರಿಂದ ಆಸ್ತಿಗಳನ್ನು ಖರೀದಿ ಮಾಡಲು ಸಾಮರ್ಥವಿತ್ತು ಎಂದರೆ ಇರಬಹುದೇನೋ, ನನಗೆ ಗೊತ್ತಿಲ್ಲ. ನಾನು ಆ ಕ್ರಯ ಪತ್ರಗಳನ್ನು ನೋಡಿಲ್ಲವೇ? ಎಂದರೆ ನೋಡಿದ್ದೇನೆ. ಅದು 1974 ರ ಕ್ರಯ ಪತ್ರ . ಸುಮಿತ್ರಮ್ಮ ನಮ್ಮ ತಾಯಿ ಇರುತ್ತಾರೆ. ಸುಮಿತ್ರಮ್ಮನ ಮಕ್ಕಳ ಪೈಕಿ ಕುಬೇರಪ್ಪನೇ ಹಿರಿಯ ಮಗ ಎಂದರೆ ಸರಿ. ನನ್ನ ಅಣ್ಣ ಕುಬೇರಪ್ಪ 1972 ರಲ್ಲಿ ಜನಿಸಿದ್ದ ಎಂದರೆ ಸರಿ. ದನಗಳನ್ನು ಮತ್ತು ಮೇಕೆಗಳನ್ನು ಸಾಕುವ ಕೆಲಸವನ್ನು ನನ್ನ ಅಣ್ಣ ಕುಬೇರಪ್ಪನೇ ಪ್ರಾರಂಭ ಮಾಡಿದ್ದರು ಎಂದರೆ ಇಲ್ಲ, ನನ್ನ ಅಣ್ಣ ಹುಟ್ಟುವ ಮುಂಚೆಯೇ ಕುಟುಂಬದಲ್ಲಿ ಅದನ್ನು ಮಾಡುತ್ತಿದ್ದರು. ನಾನು ಕಳೆದ ಬಾರಿ ನನ್ನ ಅಣ್ಣನಿಗೆ 10 ವರ್ಷ ಇದ್ದಾಗ ಹೈನುಗಾರಿಕೆ ಪ್ರಾರಂಭ ಮಾಡಿದ್ದೆವು ಎಂದು ಹೇಳಿ ಈ ದಿನ ನನ್ನ ಅಣ್ಣ ಹುಟ್ಟುವ ಮುಂಚೆಯೇ ಕುಟುಂಬದಲ್ಲಿ ಹೈನುಗಾರಿಕೆ ಮಾಡುತ್ತಿದ್ದರು ಎನ್ನುತ್ತಿದ್ದು ಯಾವುದು ಸರಿಯಾದ ಹೇಳಿಕೆ? ಎಂದರೆ ಎರಡೂ ಹೇಳಿಕೆಗಳು ಸರಿ ಇರುತ್ತವೆ. 1972 ಕ್ಕಿಂತ ಮುಂಚೆ ನಮ್ಮ ಕುಟುಂಬದಲ್ಲಿ ಹೈನುಗಾರಿಕೆ ಮಾಡುತ್ತಿದ್ದರು ಎಂಬ ಬಗ್ಗೆ ದಾಖಲೆಗಳು ಇರುತ್ತವೆಯೇ? ಎಂದರೆ ಇರುವುದಿಲ್ಲ. ಆ ಸಮಯದಲ್ಲಿ ಸುಮಿತ್ರಮ್ಮನ ದುಡಿಮೆ ಬಿಟ್ಟು ಕುಟುಂಬಕ್ಕೆ ಬೇರೆ ಆದಾಯವಿರಲಿಲ್ಲ ಎಂದರೆ ಹೈನುಗಾರಿಕೆ ಇತ್ತು. ಆಗ ದನ ಮತ್ತು ಮೇಕೆ ಮೇಯಿಸಲು ನಾವು ಮುಸ್ಲಿಂ ವ್ಯಕ್ತಿಯೊಬ್ಬನನ್ನು ನೇಮಿಸಿಕೊಂಡಿದ್ದೆವು. ಅದು ಆತನದೇ ಉತ್ಪನ್ನವಾಗಿತ್ತು ಎಂದರೆ ಸರಿ. ಕುಟುಂಬಕ್ಕೆ ಆ ರೀತಿ ಉತ್ಪನ್ನವಿತ್ತು ಎಂಬ ಬಗ್ಗೆ ವಾದ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ ಎಂದರೆ ಸರಿ. ಆ ಸಮಯದಲ್ಲಿ ನನ್ನ ತಾಯಿಗೆ ಎಷ್ಟು ಬಂಗಾರವಿತ್ತು? ಎಂದು ನನಗೆ ಗೊತ್ತಿಲ್ಲ ಆದರೆ ನಮ್ಮ ಅಜ್ಜಿಯ ಮನೆಯವರು ಬಂಗಾರ ಕೊಟ್ಟಿದ್ದಾರೆಂದು ಗೊತ್ತು. ಅಜ್ಜಿಯ ಮನೆಯವರು ನನ್ನ ಅಣ್ಣ ಹುಟ್ಟುವ ಮುಂಚೆಯೇ ಬಂಗಾರ ಕೊಟ್ಟಿರಬಹುದು. 1972 ರ ನಂತರ ನನ್ನ ತಾಯಿ ಬಳಿ ಎಷ್ಟು ಬಂಗಾರ ಉಳಿದಿತ್ತೆಂದು ನನಗೆ ಗೊತ್ತಿದೆಯೇ? ಎಂದರೆ ಇಲ್ಲ. 1970 ರಿಂದ ನನ್ನ ತಾಯಿ ತೀರಿಕೊಳ್ಳುವವರೆಗೆ ನನ್ನ ತಾಯಿ ಎಲ್ಲಿಲ್ಲಿ ಎಷ್ಟೆಷ್ಟು ಬಂಗಾರ ಮಾರಾಟ ಮಾಡಿದ್ದರು ಎಂಬ ಬಗ್ಗೆ ಗೊತ್ತಿದೆಯೇ? ಎಂದರೆ ಗೊತ್ತಿಲ್ಲ. ನನಗೆ ಖುದ್ದಾಗಿ ಮಾಹಿತಿ ಇರಲಿಲ್ಲವಾದ್ದರಿಂದ ವಾದ ಪತ್ರದಲ್ಲಿ ಅಂದಾಜಿನ ಮೇಲೆ ಇದರ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನೇ ಮಾಹಿತಿ ಕೊಟ್ಟು ಪರಶೆಟ್ಟಿ ಮೂಲ ಮನೆತನದ ಎಲ್ಲಾ ಸದಸ್ಯರ ಹೆಸರುಗಳನ್ನು ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸರಿ. ನಾನು ನನ್ನ ಸಾಕ್ಷಿ ವಿಚಾರಣೆ ಆದ ನಂತರ ಈ ಮಾಹಿತಿ ಕೊಟ್ಟು ಅವರನ್ನೆಲ್ಲಾ ದಾವೆಗೆ ಸೇರಿಸಿದ್ದೇನೆ ಎಂದರೆ ಸರಿ. ಇದು ಪರಶೆಟ್ಟಿಯವರ ಕುಟುಂಬದ ಆಸ್ತಿಯಾಗಿರುವ ಕಾರಣ ಅವರನ್ನೆಲ್ಲಾ ದಾವೆಗೆ ಸೇರಿಸಿದ್ದೇನೆ ಎಂದರೆ ಅಲ್ಲ, ನಾವು ಕೂಡಾ ಪರಶೆಟ್ಟಿ ಕುಟುಂಬಕ್ಕೆ ಸೇರಿಸಿದ್ದೇವೆ ಎಂದು ರುಜುವಾತುಪಡಿಸಲು ಅವರನ್ನು ದಾವೆಗೆ ಸೇರಿಸಿದ್ದೇನೆ. ಅದೇ ಸಂಗತಿಯನ್ನು ನನ್ನ ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಬರೆಯಿಸಿರಲಿಲ್ಲ ಎಂದರೆ ಮೊದಲು ಬರೆಯಿಸಿರಲಿಲ್ಲ, ನಂತರ ಬರೆಯಿಸಿರಬಹುದು.

***(ಸಮಯ ಮಧ್ಯಾಹ್ನ 2.00 ಗಂಟೆಯಾಗಿದ್ದರಿಂದ ಮುಂದುವರೆದ ಪಾಟೀಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಿತು).***

**ಮಧ್ಯಾಹ್ನ 2.45 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು : 2 ನೇ ಪ್ರತಿವಾದಿಯ ಪರ ವಕೀಲರಿಂದಃ**

6. ವೀರಪ್ಪನವರ ತಮ್ಮ ವಿರುಪಾಕ್ಷಿ ಎಂದರೆ ಸರಿ. ಮಧ್ಯಂತರ ಅರ್ಜಿ 9 ನ್ನು ಸಲ್ಲಿಸಿ ಯೋಗೀಶ ದತ್ತಕ ತಂದೆ ಪರಶೆಟ್ಟಿ ವೀರಪ್ಪ ಎನ್ನುವವರು ದಾವೆಯಲ್ಲಿ ಹಾಜರಾಗಿದ್ದಾರೆ ಎಂದರೆ ಸುಳ್ಳು. ಸದರಿ 2 ನೇ ಪ್ರತಿವಾದಿ ಸಲ್ಲಿಸಿದ್ದ ಮಧ್ಯಂತರ ಅರ್ಜಿ 9 ನ್ನು ಪುರಸ್ಕರಿಸಿದ ಆದೇಶವನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸಲ್ಲಿಸಿದ್ದೇನೆ. ಅದರ ವಿರುದ್ಧ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದೇನೆ. ಸದರಿ ರಿಟ್ ಅರ್ಜಿಯಲ್ಲಿ ಏನು ಆದೇಶವಾಗಿದೆ ಎಂದು ನನಗೆ ಗೊತ್ತಿಲ್ಲ. ಕಡತದಲ್ಲಿ ರಿಟ್ ಅರ್ಜಿ ಸಂ. 107290/2023 ಮತ್ತು ಇತರೆ ಎರಡು ರಿಟ್ ಅರ್ಜಿಗಳು ದಿನಾಂಕ 19.07.2024 ರಂದು ವಜಾ ಆಗಿರುವ ಆದೇಶ ಕಂಡು ಬಂದಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ನಾನು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ನಾನು ಯೋಗೀಶ ದತ್ತಕ ತಂದೆ ಪರಶೆಟ್ಟಿ ವೀರಪ್ಪ ಎಂಬುದನ್ನು ಯೋಗೀಶ ತಂದೆ ವಿರುಪಾಕ್ಷಪ್ಪ ಎಂದು ತಿದ್ದುಪಡಿ ಮಾಡುವಂತೆ ಅರ್ಜಿ ಸಲ್ಲಿಸಲಿಲ್ಲ ಎಂದರೆ ಸರಿ. ಹಾಗಿದ್ದರೂ ಕೂಡಾ ವಾದ ಪತ್ರ ಶೀರ್ಷಿಕೆ ತಿದ್ದುಪಡಿ ಮಾಡುವಾಗ ಕೋರ್ಟ್ ಆದೇಶವಿಲ್ಲದೇ ಯೋಗೀಶ ತಂದೆ ವಿರುಪಾಕ್ಷಪ್ಪ ಎಂದು ತೋರಿಸಿದ್ದೇನೆ ಎಂದರೆ ಸರಿ.

7. ವೀರಪ್ಪನವರು 1998 ರಲ್ಲಿ ವಿಲ್ ಬರೆದಿದ್ದಾರೆ. ನನಗೆ ವಿಲ್ ಬರೆದ ದಿನಾಂಕ ಮತ್ತು ತಿಂಗಳು ನೆನಪಿಲ್ಲ. ವೀರಪ್ಪನವರು ದಿನಾಂಕ 14.10.2009 ರಂದು ಮೃತಪಟ್ಟರು ಎಂದರೆ ಸರಿ. ಅವರು ತೀರಿಕೊಂಡ ಕಾಲಕ್ಕೆ ನನಗೆ ವಿಲ್ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಸುಮಿತ್ರಮ್ಮನಿಗೂ ಮಾಹಿತಿ ಇರಲಿಲ್ಲವೇ? ಎಂದರೆ ಇರಲಿಲ್ಲ, ನನ್ನ ತಂದೆ ತೀರಿಕೊಂಡ ನಂತರ ಮನೆ ಬಳಿಯುವಾಗ ವಿಲ್ ಸಿಕ್ಕಿತು. 2009 ರಲ್ಲೇ ವಿಲ್ ಬಗ್ಗೆ ನನ್ನ ತಾಯಿಗೆ ಮತ್ತು ನನಗೆ ಮಾಹಿತಿ ಇತ್ತು ಎಂದರೆ ಸರಿ. 2009 ರಲ್ಲೇ ಕೋರ್ಟಿಗೆ ವಿಲ್ ಹಾಜರುಪಡಿಸಿ ದೃಢೀಕರಣ ಅಥವಾ ಪ್ರೊಬೇಟ್ ಕೋರಲು ನಮಗೆ ತೊಂದರೆ ಇರಲಿಲ್ಲ ಎಂದರೆ ನನ್ನ ತಮ್ಮನಿಗೆ ಸ್ವಲ್ಪ ಆರೋಗ್ಯ ಕೆಟ್ಟಿದ್ದರಿಂದ ಸಲ್ಲಿಸಿರಲಿಲ್ಲ. ನನ್ನ ತಮ್ಮ ಎಂದರೆ ವಾದಿ ನಂ. 1(ಬಿ) ವಸಂತಕುಮಾರ್ ವಕೀಲರು. ಪಿ.ಡಬ್ಲ್ಯೂ.-2 ಮಂಜುನಾಥಗೌಡ ತನ್ನ ಪಾಟೀಸವಾಲಿನಲ್ಲಿ ಆತನನ್ನು ಸಾಕ್ಷಿಯಾಗಿ ವಸಂತ ವಕೀಲರು ಕರೆದಿದ್ದರು ಎಂದು ಹೇಳಿರುವ ಅದೇ ವಸಂತಕುಮಾರ್ ರವರೇ ಎಂದರೆ ಹೌದು. ವಿಲ್ ಪ್ರಕಾರ ಖಾತೆ ಬದಲಾವಣೆಗೆ ನನ್ನ ತಾಯಿ ಇರುವಾಗಲೇ ನಾನೇ ಅರ್ಜಿ ಕೊಟ್ಟಿದ್ದೆ. ಈಗ ತೋರಿಸಿದ ತಹಶೀಲ್ದಾರರ ಆದೇಶವು ಅದೇ ಅರ್ಜಿಯ ಮೇರೆಗೆ ಹುಣಸಿಕಾಯಿ ಸುಮಿತ್ರಮ್ಮ ಮತ್ತು ನಾನು ಪಡೆದ ಆದೇಶವೇ? ಎಂದರೆ ಹೌದು ಎಂದಿದ್ದರಿಂದ ದೃಢೀಕೃತ ಆದೇಶ ಪ್ರತಿಯನ್ನು ನಿಡಿ **2** ಎಂದು ಗುರುತಿಸಿತು. ದಿನಾಂಕ 30.11.2010 ರಂದು ತಹಶೀಲ್ದಾರರು ನಮಗೆ ತಕರಾರು ಇದ್ದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಆದೇಶ ಮಾಡಿದ್ದಾರೆ ಎಂದರೆ ಸರಿ. ಅವತ್ತಿನಿಂದ 3 ವರ್ಷದ ಒಳಗಡೆ ನಾನು ಯಾವುದೇ ದಾವೆಯನ್ನು ಸಲ್ಲಿಸಿರಲಿಲ್ಲ ಎಂದರೆ ಹಡಗಲಿ ನ್ಯಾಯಾಲಯದಲ್ಲಿ ದಾವೆ ಹಾಕಿದ್ದೆವು ಎಂದು ಸಾಕ್ಷಿಯವರು ಹೇಳಿದ್ದಾರೆ. (ವಾದಿಗಳ ಪರ ವಕೀಲರು ಓ.ಎಸ್. ನಂ.55/2015 ನ್ನು ಕಿರಿಯ ವಿಭಾಗ ನ್ಯಾಯಾಲಯ ವಾದ ಪತ್ರ ವಾಪಸ್ಸಾತಿ ಮಾಡಿದ ನಂತರ ಈ ದಾವೆ ದಾಖಲಾಗಿದೆ ಎಂದು ಹೇಳಿದ್ದು, ವಾದ ಪತ್ರದ ಮೇಲೆ ಓ.ಎಸ್. ನಂ. 55/2015 ನ್ನು ದಿನಾಂಕ 07.04.2015 ರಂದು ಕಿರಿಯ ವಿಭಾಗ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಉಲ್ಲೇಖ ಇರುತ್ತದೆ). ಓ.ಎಸ್. ನಂ. 55/2015 ನ್ನು

2015 ನೇ ಇಸವಿಯಲ್ಲಿ ಸಲ್ಲಿಸುವ ಮುಂಚೆ ಬೇರೆ ಯಾವುದೇ ದಾವೆಯನ್ನು ನಾವು ಸಲ್ಲಿಸಿರಲಿಲ್ಲ ಎಂದರೆ ಸರಿ.

8. ಮರಣಶಾಸನ ಪತ್ರವನ್ನು ಬರೆಯುವ ಕಾಲಕ್ಕೆ ಯಾರು ಯಾರು ಹಾಜರಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮರಣಶಾಸನದಲ್ಲಿ ಏನು ಒಕ್ಕಣಿಕೆ ಇದೆ ಎಂದು ನನಗೆ ಗೊತ್ತಿರುತ್ತದೆ. ವಿಲ್ ಬರೆಯುವಾಗ ವೀರಪ್ಪನವರು ಹೃದಯಾಘಾತ ಉಂಟಾಗಿ ಅನಾರೋಗ್ಯಗೊಂಡಿದ್ದರು ಎಂದರೆ ಇಲ್ಲ, ಆರೋಗ್ಯವಾಗಿಯೇ ಇದ್ದರು. ವಿಲ್ ನಲ್ಲಿ ನಾನು ಆರೋಗ್ಯವಾಗಿಯೇ ಇದ್ದೇನೆ ಎಂದು ಬರೆದಿದ್ದಾರೆ. ನಿಪಿ 20 ವಿಲ್ ನಲ್ಲಿ ಹೃದಯಾಘಾತಗೊಂಡು , ರೋಗ ಪೀಡಿತನಾಗಿದ್ದೇನೆ ಎಂದು ಬರೆದಂತೆ ಉಲ್ಲೇಖವಾಗಿದೆ ಎಂದರೆ ಬರೆದಿರಬಹುದು, ನನ್ನ ತಂದೆಗೆ ಒಂದು ಬಾರಿ ಹಾರ್ಟ್ ಅಟ್ಯಾಕ್ ಆಗಿತ್ತು, ಆ ನಂತರ ಚೆನ್ನಾಗಿಯೇ ಇದ್ದರು. ಅವರಿಗೆ 1993 ರಲ್ಲಿ ಒಂದು ಬಾರಿ ಹಾರ್ಟ್ ಅಟ್ಯಾಕ್ ಆಗಿತ್ತು, ನಂತರ ಚನ್ನಾಗಿಯೇ ಇದ್ದರು. ಆಗ ಅವರು ದಾವಣಗೆರೆಯ ಚಿಗಟೇರಿ ಆಸ್ಪತ್ರೆಗೆ ದಾಖಲಾಗಿದ್ದರು. ಆ ಬಗ್ಗೆ ದಾಖಲೆಗಳು ಇರುತ್ತವೆಯೇ? ಎಂದರೆ ಇರುವುದಿಲ್ಲ. ಚಿಗಟೇರಿ ಆಸ್ಪತ್ರೆ ಸರ್ಕಾರಿ ಆಸ್ಪತ್ರೆಯೇ? ಅಥವಾ ಖಾಸಗಿ ಆಸ್ಪತ್ರೆಯೇ? ಎಂದರೆ ಖಾಸಗಿ ಆಸ್ಪತ್ರೆ ಇರುತ್ತದೆ. ಅದು ಸರ್ಕಾರಿ ಆಸ್ಪತ್ರೆಯಾಗಿದ್ದು, ನನಗೆ ಯಾವ ಆಸ್ಪತ್ರೆ ಎಂದು ಗೊತ್ತಿಲ್ಲದೇ ಸುಳ್ಳು ಹೇಳುತ್ತಿದ್ದೇನೆ ಎಂದು 2 ನೇ ಪ್ರತಿವಾದಿ ಸೂಚಿಸುತ್ತಾರೆ ಎಂದರೆ ಸರಿಯಲ್ಲ. ವಿಲ್ ಬರೆಯುವ ಕಾಲಕ್ಕೆ ನನಗೆ 16-17 ವರ್ಷ ವಯಸ್ಸಿತ್ತು. ಆಗ ನಾನು ಅಪ್ರಾಪ್ತ ವಯಸ್ಕಳಾಗಿದ್ದೆ ಎಂದರೆ ಸರಿ. ನಿಪಿ 20 ರಲ್ಲಿ ಅಪ್ರಾಪ್ತ ವಯಸ್ಕಳಾದ ನನಗೆ ಯಾರನ್ನಾದರೂ ಗಾರ್ಡಿಯನ್ ಎಂದು ತೋರಿಸಿದ್ದಾರೆಯೇ? ಎಂದರೆ ತೋರಿಸಿಲ್ಲ. ವಿಲ್ ಬರೆಯುವಾಗ ವೀರಪ್ಪನವರಿಗೆ ಪ್ರತ್ಯೇಕವಾದ ಹಕ್ಕು ಇರಲಿಲ್ಲ ಎಂದರೆ ಅದು ಅವರ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ಅವರಿಗೆ ವಿಲ್ ಮಾಡುವ ಹಕ್ಕು ಇತ್ತು. ವೀರಪ್ಪನವರು ವಾಸ ಮಾಡುತ್ತಿದ್ದ ಮನೆ ನಂಬರ್ ಮತ್ತು ವಾರ್ಡ್ ನಂಬರೇ ಬೇರೆ ನಮ್ಮ ತಾಯಿ ಮತ್ತು ನಾವು ವಾಸ ಮಾಡುತ್ತಿದ್ದ ಮನೆ ಹಾಗೂ ವಾರ್ಡ್ ನಂಬರೇ ಬೇರೆ ಯಾಕಿರುತ್ತದೆ? ಎಂದರೆ ನಾವು ಎರಡನೇ ಹೆಂಡತಿಯ ಮಕ್ಕಳಾಗಿದ್ದು ನಾವೇ ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದೆವು ಮತ್ತು ನಮ್ಮ ದೊಡ್ಡಮ್ಮನೇ ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದರು. ವೀರಪ್ಪ ವಾಸ ಮಾಡುತ್ತಿದ್ದ ಮನೆ ಅವರಿಗೆ ಹಿರಿಯರಿಂದ ಬಂದ ಸ್ವಂತ ಮನೆಯಾಗಿತ್ತು ಎಂದರೆ ಹೌದು, ತಾತನ ಆಸ್ತಿ. ನನ್ನ ತಾಯಿ ಸುಮಿತ್ರಮ್ಮ ಪಿಂಜಾರ್ ಓಣಿ 7 ನೇ ವಾರ್ಡಿನಲ್ಲಿ ವಾಸ ಮಾಡುತ್ತಿದ್ದರು. ವೀರಪ್ಪನವರು 4 ನೇ ವಾರ್ಡಿನಲ್ಲಿ ವಾಸ ಮಾಡುತ್ತಿದ್ದರು ಎಂದರೆ ಹೌದು, ನಾನು ಹೇಳುತ್ತೇನೆ, ಅಲ್ಲಿಯೂ ಇರುತ್ತಿದ್ದರು, ಇಲ್ಲೂ ಇರುತ್ತಿದ್ದರು. 1998 ರಲ್ಲಿ 7 ನೇ ವಾರ್ಡಿನ ಮನೆ ಸುಮಿತ್ರಮ್ಮನಿಗೆ ಸ್ವಂತ ಮನೆಯಾಗಿತ್ತು . ನನ್ನ ತಂದೆಯೇ ಕೊಡಿಸಿದ್ದರು. ಯಾವಾಗ ಕೊಡಿಸಿದ್ದರು? ಎಂದರೆ ದಿನಾಂಕ ನೆನಪಿಲ್ಲ, 35 ವರ್ಷಕ್ಕಿಂತ ಹಿಂದೆ ಖರೀದಿ ಮಾಡಿದ್ದಾರೆ. ಆ ಮನೆ ವಾದಿ ಸುಮಿತ್ರಮ್ಮನ ವೈಯಕ್ತಿಕ ಹೆಸರಿನಲ್ಲಿದ್ದ ಆಸ್ತಿ ಎಂದರೆ ಸರಿ. ವೀರಪ್ಪನವರೇ ಆ ಮನೆಯನ್ನು ವಾದಿ ಸುಮಿತ್ರಮ್ಮನಿಗೆ ಕೊಡಿಸಿದ್ದಾರೆ ಎಂಬ ಬಗ್ಗೆ ಯಾವುದಾದರೂ ದಾಖಲೆಗಳು ಇರುತ್ತವೆಯೇ? ಎಂದರೆ ಇಲ್ಲ. ಆ ಮನೆಯನ್ನು ವಾದಿ ಸುಮಿತ್ರಮ್ಮನೇ ಸ್ವಂತವಾಗಿ ಖರೀದಿ ಮಾಡಿದ್ದರೂ ಕೂಡಾ ಈ ದಾವೆಗೆ ಅನುಕೂಲವಾಗಲಿ ಎಂದು ವೀರಪ್ಪ ಕೊಡಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೀರಪ್ಪನವರು ಸುಮಿತ್ರಮ್ಮನ ಮನೆಯಲ್ಲಿ ವಾಸ ಮಾಡಿದ ಬಗ್ಗೆಯಾಗಲೀ ಅಥವಾ ವೀರಪ್ಪನವರ ಜೊತೆ ಸುಮಿತ್ರಮ್ಮ ಮತ್ತು ನಾವು ವಾಸ ಮಾಡಿದ ಬಗ್ಗೆಯಾಗಲೀ ಯಾವುದಾದರೂ ದಾಖಲೆಗಳು ಇವೆಯೇ? ಎಂದರೆ ನಾವೇ ಅದಕ್ಕೆ

ಸಾಕ್ಷಿ, ಶಾಲಾ ದಾಖಲೆಗಳಲ್ಲಿ ಅವರು ಹೆಸರು ನಮೂದಾಗಿದೆ. ಜೊತೆಯಲ್ಲಿ ವಾಸ ಮಾಡಿದ ಬಗ್ಗೆ ರೇಶನ್ ಕಾರ್ಡ್ ಅಥವಾ ಇತರೆ ದಾಖಲೆಗಳು ಇರುತ್ತವೆಯೇ? ಎಂದರೆ ಇಲ್ಲ, ನನ್ನ ಅಣ್ಣ ಮತ್ತು ನನ್ನ ಲಗ್ನ ಪತ್ರಿಕೆಗಳು ಇರುತ್ತವೆ. ಲಗ್ನ ಪತ್ರಿಕೆಗಳನ್ನು ದಾವೆ ಹಾಕಿದ ನಂತರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ 1 ರಿಂದ ನಿಪಿ 21 ರಲ್ಲಿ ಲಗ್ನಪತ್ರಿಕೆಗಳು ಇಲ್ಲ ಎಂದರೆ ಹಾಜರುಪಡಿಸಿಲ್ಲ. ವೀರಪ್ಪ ಪರಶೆಟ್ಟಿಯವರು ಲಿಂಗಾಯತರು ಎಂದರೆ ಸರಿ. ನನ್ನ ತಾಯಿ ವಾಲ್ಮೀಕಿ ಜನಾಂಗದವರು. ನಾನು ಹೇಳುತ್ತೇನೆ, ಇಂಟರ್ ಕಾಸ್ಟ್ ಮ್ಯಾರೇಜ್ ಮಾಡಿಕೊಂಡಿದ್ದರು. ನನ್ನ ತಾಯಿ, ನಾನು ಮತ್ತು ನನ್ನ ಸಹೋದರರು ಇವತ್ತಿನವರೆಗೆ ವಾಲ್ಮೀಕಿ ಸಮುದಾಯದವರಾಗಿಯೇ ಮುಂದುವರೆಯುತ್ತಿದ್ದೇವೆ ಎಂದರೆ ಸರಿ. ಎಲ್ಲಾ ಮೀಸಲಾತಿ ಮತ್ತು ಸರ್ಕಾರಿ ಸೌಲಭಗಳನ್ನು ವಾಲ್ಮೀಕಿ ಸಮುದಾಯವರಾಗಿಯೇ ಪಡೆದಿದ್ದೇವೆ ಎಂದರೆ ಸರಿ. ನನ್ನ ತಂದೆ ಲಿಂಗಾಯತ ಸಮುದಾಯಕ್ಕೆ ಸೇರಿದ ನಂತರ ನಾವು ವಾಲ್ಮೀಕಿ ಸಮುದಾಯದವರಾಗಿ ಮುಂದುವರೆಯಲು ಅವಕಾಶವಿರುವುದಿಲ್ಲ ಎಂದರೆ ನಮ್ಮ ತಂದೆ ನಮ್ಮನ್ನು ಲಿಂಗಾಯತ ಸಮುದಾಯಕ್ಕೆ ಸೇರಿಸಿಕೊಳ್ಳಲಿಲ್ಲ. ವೀರಪ್ಪ ಪರಶೆಟ್ಟಿ ನನ್ನ ತಾಯಿಯನ್ನು ಮದುವೆಯಾಗಿಲ್ಲ ಮತ್ತು ನಾವು ಅವರ ಮಕ್ಕಳಲ್ಲ ಎಂದು ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೀರಪ್ಪನವರು ಸುಮಿತ್ರಮ್ಮನ ಜೊತೆ ಯಾವುದೇ ಕಾಲಕ್ಕೆ ವಾಸ ಮಾಡಿರಲಿಲ್ಲವಾದ್ದರಿಂದ ನಿಪಿ 20 ವಿಲ್ ಅವರು ಸಾಯುವವರೆಗೆ ಅವರ ವಶದಲ್ಲೇ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೀರಪ್ಪ 4 ನೇ ವಾರ್ಡಿನಲ್ಲಿ ವಾಸ ಮಾಡುತ್ತಿದ್ದಾಗ 7 ನೇ ವಾರ್ಡಿನಲ್ಲಿ ವಾಸ ಮಾಡುತ್ತಿದ್ದ ನಮ್ಮ ಸ್ವಾಧೀನಕ್ಕೆ ವಿಲ್ ಬರುವ ಪ್ರಶ್ನೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ 20 ರ 3 ನೇ ಪೇಜಿನಲ್ಲಿರುವ ಮೊದಲನೇ ಪ್ಯಾರಾಕ್ಕೂ ಮತ್ತು ಶೆಡ್ಯೂಲ್ ವಿವರಗಳಲ್ಲಿನ ಬರವಣಿಗೆಯಲ್ಲಿ ತುಂಬಾ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ವೀರಪ್ಪನವರಿಗೆ ಆರೋಗ್ಯ ಸರಿಯಿಲ್ಲದಿದ್ದಾಗ ಮತ್ತು ಅವರಿಗೆ ಮಾನಸಿಕವಾಗಿ ಸ್ವಾಸ್ಥತೆ ಇಲ್ಲದಿರುವಾಗ ಬಲವಂತವಾಗಿ ನಿಪಿ 20 ನ್ನು ಬರೆಯಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನಾವು ವೀರಪ್ಪನವರಿಗೆ ಅನಾರೋಗ್ಯ ಇರುವಾಗ ಬಲವಂತವಾಗಿ ಅವರಿಂದ ವಿಲ್ ಬರೆಯಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾಯಿ ಮತ್ತು ನಮಗೆಲ್ಲಾ ವೀರಪ್ಪನವರಿಗೆ ವಿಲ್ ಬರೆಯುವ ಪ್ರತ್ಯೇಕವಾದ ಹಕ್ಕು ಹಿತಾಸಕ್ತಿ ಇರಲಿಲ್ಲವೆಂದು ಗೊತ್ತಿತ್ತು ಎಂದರೆ ಸರಿಯಲ್ಲ. ಆಸ್ತಿ ಹೊಡೆದುಕೊಳ್ಳಲು ನಮ್ಮ ತಾಯಿ ಮತ್ತು ನಾವು ವಿಲ್ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 20 ರ ಸಾಕ್ಷಿಗಳು ನಮಗೆ ಬೇಕಾದ ವ್ಯಕ್ತಿಗಳು ಮತ್ತು ನಮ್ಮದೇ ವಾರ್ಡಿನಲ್ಲಿ ವಾಸ ಮಾಡುವವರು ಎಂದರೆ ಒಬ್ಬರು ನನ್ನ ತಂದೆಯ ಸ್ನೇಹಿತರು ಮತ್ತು ಇನ್ನೊಬ್ಬರ ಜಮೀನನ್ನು ನಮ್ಮ ತಂದೆ ಉಳುಮೆ ಮಾಡುತ್ತಿದ್ದರು. ಆ ಜಮೀನಿನ ಸರ್ವೇ ನಂಬರ್ ಏನು? ಎಂದರೆ ನನಗೆ ಗೊತ್ತಿಲ್ಲ, ನನ್ನ ಅಣ್ಣನಿಗೆ ಗೊತ್ತು. ಆ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಸದರಿ ಸಾಕ್ಷಿಗಳು ನಮಗೆ ಬೇಕಾದ ವ್ಯಕ್ತಿಗಳಾಗಿದ್ದು, ವೀರಪ್ಪನವರಿಗೆ ಆತ್ಮೀಯರಾಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲ್ ಪ್ರಕಾರ ನಮಗೆ ಯಾವುದೇ ಹಕ್ಕು ಮತ್ತು ಅಧಿಕಾರ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ವಿಲ್ ಬರೆಯುವವರಿಗೆ ಆಸ್ತಿ ಕೊಡುವ ಸಂಪೂರ್ಣ ಹಕ್ಕು ಇಲ್ಲದಿರುವಾಗ ವಿಲ್ ಪಡೆಯುವವರಿಗೆ ಕೂಡಾ ಹಕ್ಕು ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳು ಗೊತ್ತಿದ್ದೂ ಉದ್ದೇಶ ಪೂರಿತವಾಗಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೀರಪ್ಪನವರ ಮರಣಾ ನಂತರ ಈ ಆಸ್ತಿ ಕಾಳಮ್ಮನವರಿಗೆ ಬಂದಿದೆ ಎಂದರೆ ಸರಿ. ಕಾಳಮ್ಮನ ಮರಣಾ ನಂತರ 2 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡುವಂತೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾವು ತಕರಾರು ಸಲ್ಲಿಸಿ ಅದರ ಬಗ್ಗೆ ಪ್ರಕರಣ ನಡೆದಿತ್ತು ಎಂದರೆ ಸರಿ. ಆ ಬಗ್ಗೆ ತಹಶೀಲ್ದಾರರು

ಮಾಡಿದ ಆದೇಶದ ಪ್ರತಿ ತೋರಿಸಿದ್ದು ಸರಿ ಎಂದು ಒಪ್ಪಿದ್ದರಿಂದ ನಿಡಿ **3** ಎಂದು ಗುರುತಿಸಿತು. ಆದ್ದರಿಂದ ಸದರಿ ಆದೇಶವಾದ ನಂತರ ಇಲ್ಲಿಯವರೆಗೂ ಯೋಗೀಶ ದತ್ತಕ ತಂದೆ ಪರಶೆಟ್ಟಿ ವೀರಪ್ಪ ಇವರ ಹೆಸರಿನಲ್ಲೇ ಖಾತೆ ನಮೂದಾಗಿದೆ ಎಂದರೆ ಸರಿ, ಸುಳ್ಳು ಖಾತೆ ಮಾಡಿಸಿಕೊಂಡಿದ್ದಾರೆ. ಸದರಿ ಆದೇಶವನ್ನು ಪ್ರಶ್ನಿಸಿ ನಾವು ಅಪೀಲು ಸಲ್ಲಿಸಿಲ್ಲ ಎಂದರೆ ಸಲ್ಲಿಸಿದ್ದೇವೆ. ನನಗೆ ಅಪೀಲು ಸಂಖ್ಯೆ ಹೇಳಲು ಬರುವುದಿಲ್ಲ. ಅದರಲ್ಲಿ ಏನು ಆದೇಶವಾಗಿದೆ ಎಂದು ನನಗೆ ಗೊತ್ತಿಲ್ಲ. ವೀರಪ್ಪ ಪರಶೆಟ್ಟಿಯವರಿಗೆ 2 ನೇ ಪ್ರತಿವಾದಿ ಮಾತ್ರ ವಾರಸುದಾರನೆಂದು ನಮಗೆ ಗೊತ್ತಿದೆ ಎಂದರೆ ಸರಿಯಲ್ಲ . ಆದ್ದರಿಂದಲೇ ನಾವು ನಿಡಿ 3 ರ ಆದೇಶವನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**